# ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಎಂ.ಎ.ಸಿ.ಟಿ., ಹುನಗುಂದ.

ಎಂ.ವಿ.ಸಿ. ನಂ. 189/2013

ಪಿ.ಡಬ್ಲ್ಯು-2

| | | | |
|---|---|---|---|
| 1. | ಹೆಸರು | : | ಡಾಃ ವೆಂಕಟೇಶ ಸೊರಗಾವಿ |
| 2. | ತಂದೆಯ ಹೆಸರು | : | ರಾಮಪ್ಪ |
| 3. | ವಯಸ್ಸು | : | 62 ವರ್ಷ |
| 4. | ವೃತ್ತಿ | : | ಎಲುಬು ಮತ್ತು ಕೀಲು ತಜ್ಞರು |
| 5. | ವಾಸ | : | ಬಾಗಲಕೋಟ |

ದಿನಾಂಕಃ 29-12-2016.

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಶ್ರೀ ಎನ್.ಎಲ್.ಟಿ. ವಕೀಲರಿಂದ,

ಅರ್ಜಿದಾರರು ಬಾಗಲಕೋಟೆಯ ಸೊರಗಾವಿ ಆಸ್ಪತ್ರೆಯಲ್ಲಿ ದಿನಾಂಕಃ 11-10-2012 ರಿಂದ 04-12-2012 ರ ವರೆಗೆ ಒಳರೋಗಿಯಾಗಿ ದಾಖಲಾಗಿದ್ದರು. ಅರ್ಜಿದಾರನನ್ನು ಪರೀಕ್ಷಿಸಿದಾಗ, ಈ ಕೆಳಕಂಡ ಗಾಯಗಳು ಕಂಡುಬಂದವು.

1) ಬಲಪಾದಕ್ಕೆ ಜಜ್ಜಿದ ಗಾಯವಾಗಿತ್ತು.

2) ಬಲಪಾದದ ಮೂಳೆಗಳು ಮುರಿದಿದ್ದವು.

2. ಅರ್ಜಿದಾರನಿಗೆ ಆದ ಗಾಯಗಳಿಗೆ ನಾನು ಶಸ್ತ್ರ ಚಿಕಿತ್ಸೆ ಮಾಡಿದ್ದೇನೆ. ಅರ್ಜಿದಾರನಿಗೆ ಮತ್ತೊಮ್ಮೆ ಚರ್ಮ ಕಸಿ ಮಾಡುವ ಬಗ್ಗೆ ಶಸ್ತ್ರ ಚಿಕಿತ್ಸೆ ಮಾಡಿದ್ದೇನೆ.

3. ಸಾಕ್ಷಿಗೆ ನಿಪಿ-8 ನ್ನು ತೋರಿಸಿದ್ದು, ಅದನ್ನು ತಾನೇ ನೀಡಿದ್ದೇನೆ ಎಂದು ನುಡಿದಿರುತ್ತಾರೆ. ನಿಪಿ-8 ರಲ್ಲಿನ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಿಪಿ-9 ರ ಪ್ರಕಾರ, ಕೊಟ್ಟಿರುವಂತಹ ಔಷಧಿ ಚೀಟಿಗಳು ನಮ್ಮ ಆಸ್ಪತ್ರೆಯಿಂದ ಅರ್ಜಿದಾರನಿಗೆ ನೀಡಿದ ಔಷಧಿ ಚೀಟಿಗಳಿರುತ್ತವೆ.

4. ಅರ್ಜಿದಾರನು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ, ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದು-ಹೋಗಿರುತ್ತಾರೆ. ಅರ್ಜಿದಾರನಿಗೆ ಉಂಟಾಗಿರುವ ಗಾಯಗಳಿಂದ ಆಕೆಯು ಒಬ್ಬ ಸಾಮಾನ್ಯ ಆರೋಗ್ಯವಂತ ವ್ಯಕ್ತಿ ಮಾಡುವಂತಹ ಕೆಲಸಗಳನ್ನು ಮಾಡಲಾಗುವುದಿಲ್ಲ.

5. ಅರ್ಜಿದಾರಳಿಗೆ ಸಂಬಂಧಪಟ್ಟ ಕೇಸ ಶೀಟ ನೋಡುತ್ತಿದ್ದು, ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ

6. 1 ನೇ ಎದುರುದಾರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಆದುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.